## ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಪರಮೇಶಣ್ಣನವರ ಹನುಮವ್ವ ಗಂಡ ಲೇಟ್ ಬಸಪ್ಪ ,<br>ಮೈಲಾರ ಗ್ರಾಮ, ಹಡಗಲಿ ತಾ. | ಪಿ.ನಿಂಗಪ್ಪ ತಂದೆ ದೇವೇಂದ್ರಪ್ಪ ,<br>ಮೈಲಾರ ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಮೈಲಾರ | 259/ಎಬಿ | 2-84 | ಖುಷ್ಕಿ |

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹ್ಯಾರಡ ಗ್ರಾಮದ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ಮೈಲಾರ ಗ್ರಾಮದ ನಿವಾಸಿಯಾದ ಪರಮೇಶಣ್ಣನವರ ಹನುಮವ್ವ ಗಂಡ ಲೇಟ್ ಬಸಪ್ಪ ಇವರು ದಿ:20-3-2012 ರಂದು ಮಾಡಿಕೊಂಡ ನೋಂದಣಿಯಾಗದ ಪಾಲು ವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿ:31-5-2013 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:29-6-2013 ರಂದು ಪಿ.ನಿಂಗಪ್ಪ ತಂದೆ ದೇವೇಂದ್ರಪ್ಪ, ಮೈಲಾರ ಗ್ರಾಮ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 67/2012-13 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:27-6-2013 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮಾತ್ರ ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ಗೈರು ಹಾಜರಾಗಿದ್ದು, ಸತತವಾಗಿ ವಿಚಾರಣೆಗೆ ಹಾಜರಾಗಿರುವುದಿಲ್ಲ. ಪ್ರಕರಣದಲ್ಲಿ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ಸಲ್ಲಿಸಿದ ತಕರಾರಿನಲ್ಲಿ ಸದರಿ ಜಮೀನು ಜಂಟಿ ಪಟ್ಟಾದಾರರಿದ್ದು, ಅರ್ಜಿದಾರರು ಪಾಲುಪಟ್ಟಿ ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಬಗ್ಗೆ ನಮ್ಮಗಳ ಅವಿಭಕ್ತ ಕುಟುಂಬವಿದ್ದಾಗ ಸಾಲ ವಗೈರ ಬಗೆಹರಿದಿಲ್ಲವಾದ್ದರಿಂದ ಸದರಿ ಹಕ್ಕು ಬದಲಾವಣೆ ಮಾಡಲು ನನ್ನ ಆಕ್ಷೇಪಣೆ ಇರುವುದರಿಂದ ತಕರಾರು ಸಲ್ಲಿಸಿರುವುದಾಗಿ ಇರುತ್ತದೆ. ಆದರೆ ತಕರಾರುದಾರರು ವಿಚಾರಣೆಗೆ ಹಾಜರಾಗಿರುವುದಿಲ್ಲ. ತಕರಾರಿನಲ್ಲಿ ತಿಳಿಸಿದಂತೆ ಸದರಿ ಜಮೀನಿನ ಪಹಣಿ ಕಾಲಂ 9 ರಲ್ಲಿ ಜಂಟಿ ಪಟ್ಟಾದಾರರಿರುವುದರಿಂದ ಅರ್ಜಿದಾರರೊಬ್ಬರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಬರದ ಕಾರಣ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/24/2013-14

ದಿನಾಂಕ:17-10-2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 67/2012-13ರ ಪ್ರಕರಣದಲ್ಲಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.